ಪಂ. ವಿ.ಎಂ. ನಾಗರಾಜ್ ಅವರದು ಶಾಸ್ತ್ರೀಯ ಸಂಗೀತದ ಮಟ್ಟಿಗೆ ಬಹುಶ್ರುತ ವ್ಯಕ್ತಿತ್ವ. ಸಂಗೀತ ಪರಂಪರೆಯಲ್ಲಿ ಹಿರಿಯ ಅನುಭವಿ ಗಾಯಕ, ಬೋಧಕ, ಸಂಗೀತ ಕೃತಿ ನಿರ್ಮಾತೃ, ತಾಳ ರಚನಾಕಾರ, ಸಂಗೀತ ಬರಹಗಾರ, ಸಂಗೀತ ಪರೀಕ್ಷಾ ನಿರ್ವಾಹಕ... ಹೀಗೆ ಹತ್ತು ಹಲವು ವಿಶೇಷಣಗಳನ್ನು ಒಡಲಲ್ಲಿ ಇಟ್ಟುಕೊಂಡು ನಿರಂತರ ಸಂಗೀತದೊಂದಿಗೆ ಬದುಕನ್ನೇ ತೊಡಗಿಸಿಕೊಂಡವರು. ಸಾವಿರಾರು ಶಿಷ್ಯ ವರ್ಗವನ್ನು ಹೊಂದಿರುವ ಪಂ. ನಾಗರಾಜ್ ಸಂಗೀತದೊಂದಿಗೆ ಬದುಕನ್ನು ಬೆಸೆದಿರುವುದು ಅವರ ಹೆಚ್ಚುಗಾರಿಕೆ.




ಕರ್ನಾಟಕ ಕಲಾಶ್ರೀ ಪ್ರಶಸ್ತಿ ಪಡೆಯುತ್ತಿರುವ ಪಂ. ವಿ.ಎಂ. ನಾಗರಾಜ್

### ತಾಳಗಳ ರಚನೆ

ಸಂಗೀತದಲ್ಲಿ ರಾಗಗಳಷ್ಟೇ ಪ್ರಾಮುಖ್ಯತೆ ತಾಳಗಳಿಗೂ ಇದೆ. ವಿ.ಎಂ. ನಾಗರಾಜ್ ಅವರು ಹಿಂದೂಸ್ತಾನಿ ಸಂಗೀತಕ್ಕಾಗಿಯೇ ಹತ್ತು ತಾಳಗಳನ್ನು ರಚಿಸಿ ಧಾರೆ ಎರೆಯುವ ಮೂಲಕ ತಾಳ ರಚನೆಯ ಸಂಗೀತ ಭಾಷ್ಯ ಬರೆದಿದ್ದಾರೆ. ಸಾಧನೆ–ಬೋಧನೆ ಇವರ ಸಂಗೀತ ವೈಶಿಷ್ಟ್ಯ. ಹತ್ತು ತಾಳಗಳಲ್ಲದೆ ಹಿಂದೂಸ್ತಾನಿ ಶೈಲಿಯ 12 ಸ್ವರಗಳ ಮೇಲೆ ಒಂದು ಸರ್‌ಗಮ್ ಗೀತೆ ಮತ್ತು ತರಾನ ರಚನೆ ಮಾಡಿದ್ದಾರೆ. ಇದು ರಾಷ್ಟ್ರಮಟ್ಟದ ಖ್ಯಾತಿ ಗಳಿಸಿದೆ. ಹಿಂದೂಸ್ತಾನಿ ಸಂಗೀತದ 'ಥಾಟ್' ರಾಗಗಳ ಮೇಲೆ 'ಥಾಟ್ ಮಾಲಿಕಾ' ಎಂದು ಹಾಡುಗಳನ್ನು ರಚಿಸಿದ್ದಾರೆ. ಭೈರವ್, ಭೈರವಿ, ಕಾಫಿ, ಅಸಾವರಿ, ತೋಡಿ.. ಹೀಗೆ ಎಲ್ಲ ಥಾಟ್‌ಗಳನ್ನು ತೆಗೆದುಕೊಂಡು ಇದರ ಮೇಲೆ ಹೊಸ ಕೃತಿ ರಚನೆ ಮಾಡಿರುವುದು ಪಂ.ವಿ.ಎಂ. ನಾಗರಾಜ್ ಅವರ ಮತ್ತೊಂದು ಅನನ್ಯ ಸಾಧನೆಗೆ ಸಾಕ್ಷಿ.

ಪಂ. ಶೇಷಾದ್ರಿ ಗವಾಯಿಗಳು 'ಗಾಯನ ಗಂಗಾ' ಎಂಬ ಸಂಗೀತ ಮ್ಯಾಗಸಿನ್ ಹೊರತರುತ್ತಿದ್ದರು. ಸುಮಾರು 50 ವರ್ಷಗಳ ಕಾಲ ಅಚ್ಚುಕಟ್ಟಾಗಿ ಹೊರಬಂದ ಈ ಮ್ಯಾಗಸಿನ್‌ಗೆ ಸುಮಾರು 25 ವರ್ಷಗಳ ಕಾಲ ನಿರಂತರವಾಗಿ ಸಂಗೀತ ಲೇಖನಗಳನ್ನು ಪಂ. ವಿ.ಎಂ. ನಾಗರಾಜ್ ಬರೆದಿದ್ದಾರೆ.

'ಅದು 1958ನೇ ಇಸವಿ. ನನಗಾಗ 12 ವರ್ಷ. ಬೆಂಗಳೂರಿನ ಸೈಂಟ್ ಜೋಸೆಫ್ ಸ್ಕೂಲ್‌ನಲ್ಲಿ ಓದುತ್ತಿದೆ. ಸಂಗೀತ ಸ್ಪರ್ಧೆಯೊಂದರಲ್ಲಿ ಪ್ರಥಮ ಬಹುಮಾನ ಬಂತು. ಆಗ ಭಾರತರತ್ನ ಸರ್. ಎಂ. ವಿಶ್ವೇಶ್ವರಯ್ಯ ಅವರು ರಾಷ್ಟ್ರಕವಿ ಕುವೆಂಪು ಅವರ ಸಮ್ಮುಖದಲ್ಲಿ ನನಗೆ ಬಹುಮಾನ ನೀಡಿದರು. ಇದು ನನ್ನ ಜೀವಮಾನದಲ್ಲಿ ಮರೆಯದೇ ಇರುವಂತಹ ಅವಿಸ್ಮರಣೀಯ ಘಟನೆ' ಎಂಬುದನ್ನು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ ಈ ಸಂಗೀತ ಸಾಧಕ.

ಪಂ. ವಿ.ಎಂ. ನಾಗರಾಜ್ ಅವರ ಮನೆತನವೇ ಕಲೆಯಲ್ಲಿ ಆಸಕ್ತಿ ಉಳ್ಳದ್ದು. ತಂದೆ ತಾಯಿ ಚಿತ್ರಕಲೆ, ಕವನ ಮತ್ತು ನಾಟಕಗಳಲ್ಲಿ ಆಸಕ್ತಿ ಉಳ್ಳವರಾಗಿದ್ದರು. 1943ರಲ್ಲಿ ಬೆಂಗಳೂರಿನಲ್ಲಿ ಹುಟ್ಟಿದ ವಿ.ಎಂ. ನಾಗರಾಜ್ ಸಂಗೀತವನ್ನು ಸಂಗೀತ ಕಲಾರತ್ನ ಪಂ. ಆರ್.ವಿ. ಶೇಷಾದ್ರಿ ಗವಾಯಿ ಅವರಲ್ಲಿ ಕಲಿತರು. ರಾಜ್ಯಮಟ್ಟದ ಸೀನಿಯರ್ ಹಂತದ ಸಂಗೀತ ಸ್ಪರ್ಧೆಯಲ್ಲಿ ಚಿನ್ನದ ಪದಕ (1971), ಅಖಿಲ ಭಾರತ ಗಂಧರ್ವ ಮಹಾವಿದ್ಯಾಲಯ ನಡೆಸುವ ಸಂಗೀತ ವಿಶಾರದ ಪರೀಕ್ಷೆಯಲ್ಲಿ ಅತ್ಯುತ್ತಮ ಅಂಕ, ವಿದ್ವತ್ ಪರೀಕ್ಷೆಯಲ್ಲಿ ಉನ್ನತ ಅಂಕ ಗಳಿಸಿದವರು. ಕರ್ನಾಟಕ ಸರ್ಕಾರ ನಡೆಸುವ ಸಂಗೀತ ಬೋರ್ಡ್ ಪರೀಕ್ಷಾ ಮಂಡಳಿಯ ಅಧ್ಯಕ್ಷರಾಗಿ, ಅನೇಕ ಸಂಗೀತ ಪರೀಕ್ಷೆಗಳ ನಿರ್ಣಾಯಕರಾಗಿ, ಸಂಗೀತ ಸ್ಪರ್ಧೆಯ ನಿರ್ಣಾಯಕರಾಗಿ ವಿ.ಎಂ. ನಾಗರಾಜ್ ಅವರು ಸಂಗೀತಕ್ಕಾಗಿ ಅವಿರತವಾಗಿ ದುಡಿದವರು. ಪುರಂದರದಾಸರು, ಕನಕದಾಸರು, ಹಿಂದಿ ಭಜನ್, ವಚನಗಳು, ಕನ್ನಡ ಗೀತೆಗಳಿಗೆ ರಾಗ ಸಂಯೋಜನೆ ಮಾಡಿ ಕಳೆದ ಐದು ದಶಕಗಳಿಂದ ನಿರಂತರವಾಗಿ ಸಂಗೀತ ಕೈಂಕರ್ಯ ಮಾಡುತ್ತಾ ಬಂದವರು. ಅನೇಕ ಪುಸ್ತಕ, ಸೀಡಿ ರಚನೆ ಮಾಡಿರುವ ಹೆಮ್ಮೆಯೂ ಇವರ ಬೆನ್ನಿಗಿದೆ.



ಸಂಗೀತ ದಿಗ್ಗಜರಾದ ಗುರು ಪಂ. ಪುಟ್ಟರಾಜ ಗವಾಯಿ ಹಾಗೂ ಪಂ. ಶೇಷಾದ್ರಿ ಗವಾಯಿ ಅವರೊಂದಿಗೆ

### ಸಂಗೀತ ಶಾಲೆ, ಪ್ರಶಸ್ತಿಗಳು...!

ನಾದವಾಹಿನಿ ಶ್ರೀ ದತ್ತ ಸಂಗೀತ ವಿದ್ಯಾನಿಕೇತನ ಸಂಗೀತ ಸಂಸ್ಥೆ ನಡೆಸುತ್ತಿರುವ ಈ ವಿದ್ವಾಂಸರು ಗಾಯನ, ತಬಲಾ, ಕೊಳಲು, ಮ್ಯಾಂಡೊಲಿನ್, ಹಾರ್ಮೋನಿಯಂ, ವಯೊಲಿನ್, ಗಿಟಾರ್ ಮುಂತಾದ ವಾದ್ಯಗಳನ್ನು ತಮ್ಮ ಸಂಗೀತ ಸಂಸ್ಥೆಯಲ್ಲಿ ಆಸಕ್ತರಿಗೆ ಕಲಿಸುವ ವ್ಯವಸ್ಥೆ ಮಾಡಿದ್ದಾರೆ. ಹಿಂದೂಸ್ತಾನಿ ಸಂಗೀತ ಸುಧಾರ್ಣವ, ಸಂಗೀತ ಕಲಾರವಿಂದ, ಸಂಗೀತ ಕೇಸರಿ, ಸ್ವರಕಲಾ, ಸವಿಗಾನ ರತ್ನ, ಕರ್ನಾಟಕ ಕಲಾಶ್ರೀ, ಕೆಂಪೇಗೌಡ ಪ್ರಶಸ್ತಿ, ಸಂಗೀತ ಸಾಧಕ ಇವರ ಸಂಗೀತ ಸಾಧನೆಗೆ ಸಂದ ಪ್ರಶಸ್ತಿ, ಪುರಸ್ಕಾರಗಳು.